ಚಕ್ರವರ್ತಿಗಳು ಉಂಗುರದ ಮೇಲೆ ತಮ್ಮ ಚಿಹ್ನೆಯನ್ನು ಮುದ್ರಿಸಿ ಅದನ್ನು ರಾಜಮುದ್ರೆಯಾಗಿ ಬಳಸುತ್ತಿದ್ದರು. ಆದ್ದರಿಂದ, ಉಂಗುರವನ್ನು ಹಿಂದಿನಿಂದಲೂ 'ಮುದ್ರಿಕಾ' ಎಂದೂ ಕರೆಯುತ್ತಾರೆ. ನಂತರದ ದಿನಗಳಲ್ಲಿ ಮದುವೆಗೂ ಮುನ್ನ ನಿಶ್ಚಿತಾರ್ಥದಲ್ಲಿ ಉಂಗುರ ಬದಲಾಯಿಸುವ ಶಾಸ್ತ್ರ ಪ್ರಾರಂಭವಾಯಿತು. ಹೀಗೆ ಉಂಗುರದ ಇತಿಹಾಸ ಸಾಕಷ್ಟು ಪ್ರಚಲಿತವಾಗಿದೆ.

ಇತ್ತೀಚೆಗೆ ಉಂಗುರಗಳು ಬರೀ ಸಂಪ್ರದಾಯಕ್ಕೆ ಮಾತ್ರ ಸೀಮಿತವಾಗಿರದೆ ಫ್ಯಾಷನ್ ಲೋಕಕ್ಕೂ ಎಂಟ್ರಿ ಕೊಟ್ಟಿವೆ. ಉಂಗುರಗಳನ್ನು ತಾಮ್ರ, ಹಿತ್ತಾಳೆ, ಪಂಚಲೋಹ, ಮಿಶ್ರಲೋಹ ಹೀಗೆ ನಾನಾ ಪ್ರಕಾರದ ಲೋಹಗಳಿಂದ ತಯಾರಿಸಲಾಗುತ್ತಿದೆ. ಜಮಾನಾ ಬದಲಾದಂತೆ ಮಹಿಳೆಯರ ಅಭಿರುಚಿ ಕೂಡ ಬದಲಾಗಿದೆ. ಏನಾದರೂ ಹೊಸತನವನ್ನು ಬಯಸುವ ಮಹಿಳೆಯರ ಅಭಿರುಚಿಗೆ ತಕ್ಕಂತೆ ಫ್ಯಾಷನಿಸ್ಟ್‌ಗಳು ಅಲೆಮಾರಿ ಜನಾಂಗದ ಉಡುಗೆ ತೊಡುಗೆಯಿಂದ ಪ್ರೇರಣೆ ಪಡೆದು ಹೊಸ ಹೊಸ ವಸ್ತುಗಳು, ಉಡುಗೆ ತೊಡುಗೆಗಳನ್ನು ಮಹಿಳೆಯರಿಗೆ, ಆಸಕ್ತರಿಗೆ ಪರಿಚಯಿಸುತ್ತಾ ಬಂದಿದ್ದಾರೆ. ಇವುಗಳಲ್ಲಿ ಉಂಗುರವೂ ಒಂದು. ಇದೇ ಕನ್ನಡಿ ಇರುವ ದೊಡ್ಡ ಉಂಗುರ. ಇಡೀ ಹಸ್ತವನ್ನು ಮುಚ್ಚುವಷ್ಟು ದೊಡ್ಡದಾದ ಕನ್ನಡಿ ಅಳವಡಿಸಿರುವ ಉಂಗುರ ಉಡುಪಿಗೆ ಮೆರುಗು ನೀಡುವಂತಹ ವಿಶಿಷ್ಟ ಆಭರಣ.

## ಬೆರಳುಗಳ ಮೇಲೆ ಕನ್ನಡಿ

ವಿನ್ಯಾಸಗಾರರ ಹೊಸ ಆವಿಷ್ಕಾರ ಎಂದರೆ ಪುಟ್ಟದಾದ ಕನ್ನಡಿಯ ಸುತ್ತಲೂ ಹೂವಿನ ಆಕೃತಿಯಿಂದ ಸಿಂಗಾರಗೊಳಿಸಿ ಉಂಗುರಕ್ಕೆ ಜೋಡಿಸಲಾಗುತ್ತದೆ. ಇದನ್ನು ತೊಟ್ಟರೆ ಕೈ ಅಂದವಾಗಿ ಕಾಣಿಸುವುದಲ್ಲದೆ, ಕೈಗನ್ನಡಿಯಿಂದ ನಿಮ್ಮ ಮುಖವನ್ನು ಕೂಡ ನೋಡಿಕೊಳ್ಳಲು ಉಪಯೋಗವಾಗುತ್ತದೆ. ಇಂಥ ಉಂಗುರಗಳಲ್ಲಿ ವಿವಿಧ ವಿನ್ಯಾಸದ ಹೂಗಳ ಜೊತೆಗೆ ಸೂರ್ಯಕಾಂತಿ, ಗುಲಾಬಿ, ನಕ್ಷತ್ರ, ಹೃದಯಾಕಾರ, ಸೂರ್ಯ, ಜಾಮೆಟ್ರಿಕಲ್ ಡಿಸೈನ್, ಅರ್ಧ ಚಂದ್ರ, ಕಮಲ ಮತ್ತಿತರ ವಿನ್ಯಾಸಗಳು ಕೂಡ ಲಭ್ಯ.

ಈ ಮಿರರ್ ಅಳವಡಿಸಿದ ಉಂಗುರಗಳಿಗೆ ನಿರ್ದಿಷ್ಟ ಆಕಾರಬಣ್ಣ ಇರಬೇಕೆಂದೇನಿಲ್ಲ. ಒಟ್ಟಿಗೆ ಮಧ್ಯದಲ್ಲಿ ಕನ್ನಡಿ ಅಳವಡಿಸಿ ಅದರ ಸುತ್ತಲೂ ಬಣ್ಣ ಬಣ್ಣದ ದಾರಗಳಿಂದ ಅಲಂಕರಿಸಬಹುದು.



ಹಾಗೇ ವಿವಿಧ ವಿನ್ಯಾಸದ ಕಲ್ಲುಗಳು, ನೇತಾಡುವ ಟ್ಯಾಸಲ್‌ಗಳು, ಪ್ಲಾಸ್ಟಿಕ್‌ನ ಆಲಂಕಾರಿಕ ವಸ್ತುಗಳು, ಮರದ ತುಂಡುಗಳಿಂದ ತಯಾರಿಸಲಾದ ಡಿಸೈನ್‌ಗಳು, ಗಾಜಿನ ತುಂಡುಗಳು, ಗೆಜ್ಜೆಗಳು, ಮುತ್ತು ಮಣಿಗಳು, ಲೋಹಗಳು ಮತ್ತು ಆಕೃತಿಗಳನ್ನು ಬಳಸಿದ ಉಂಗುರಗಳೂ ಲಭ್ಯ.

ಇವು ಹಬ್ಬದ ಸಂದರ್ಭದಲ್ಲಿ ಸಾಂಪ್ರದಾಯಿಕ ಮತ್ತು ಆಧುನಿಕ ಎರಡೂ ಮನೋಭಾವದವರನ್ನು ಸೆಳೆಯುವಂತಿವೆ. ಇವು ಚಿಕ್ಕದಾಗಿರಬಹುದು ಅಥವಾ ಅಂಗೈಗೆ ಅನುಗುಣವಾಗಿ ತುಂಬಾ ದೊಡ್ಡದಾಗಿಯೂ ಇರಬಹುದು. ಹೇಗೆ ಇದ್ದರೂ ಕೈ ಬೆರಳಿಗೆ ಚೆನ್ನಾಗಿಯೇ ಕಾಣುತ್ತವೆ. ಇವುಗಳ ಜೊತೆಗೆ ಇದೀಗ ಗೋಲ್ಡ್, ಮೆಟಲ್, ಸಿಲ್ವರ್ ಕೋಟ್ ಅಲ್ಲದೆ ತಾಮ್ರ, ಕಂಚು, ಹಿತ್ತಾಳೆ ಅಥವಾ ಇನ್ನಿತರ ಬಗೆಯ ಇಂಥ ಕನ್ನಡಿ ಉಂಗುರಗಳು ನವನವೀನ ವಿನ್ಯಾಸಗಳಲ್ಲಿ ಲಗ್ಗೆ ಇಟ್ಟಿವೆ.

ಸಮಾರಂಭಕ್ಕೆ ಧರಿಸುವ ರೇಷ್ಮೆ ಸೀರೆ, ಲಾಂಗ್ ಸ್ಕರ್ಟ್, ಸಲ್ವಾರ್ ಕಮೀಜ್‌ನಂಥ ಸಾಂಪ್ರದಾಯಿಕ ಉಡುಗೆಗಳ ಜೊತೆ ಬಹಳ ಸುಂದರವಾಗಿ ಕಾಣುತ್ತವೆ. ಅಲ್ಲದೆ ಕುರ್ತಾ, ಪಲಾಜೊ ಪ್ಯಾಂಟ್ಸ್, ಜಂಪ್ ಸೂಟ್ಸ್, ಶಾರ್ಟ್ಸ್‌ಗಳ ಜೊತೆ ಆಕ್ಸಿಡೈಸ್ಡ್ ಮೆಟಲ್, ಜರ್ಮನ್ ಸಿಲ್ವರ್, ವೈಟ್ ಮೆಟಲ್, ಪ್ಲಾಟಿನಂ ಲೋಹದಿಂದ ಮಾಡಿದ ಕನ್ನಡಿ ಉಂಗುರಗಳು ಚೆನ್ನಾಗಿ ಮ್ಯಾಚ್ ಆಗುತ್ತವೆ. ಇವುಗಳನ್ನು ನೀವು ಹೋಗುವ ಇವೆಂಟ್‌ಗಳಿಗೆ ಮ್ಯಾಚ್ ಆಗುವ ರೀತಿಯಲ್ಲಿ ಧರಿಸಿದರೆ ಸಾಕು. ಅತ್ಯಂತ ಸುಂದರವಾಗಿ, ಆಕರ್ಷಕವಾಗಿ ಕಾಣುತ್ತವೆ. ■

## ಕನ್ನಡಿ ಉಂಗುರ ತೊಡುವವರಿಗೆ ಕೆಲವೊಂದು ಟಿಪ್ಸ್

- ಸೀರೆಯ ಜೊತೆ ಈ ತರಹದ ಮಿರರ್ ರಿಂಗ್ ತೊಡುವಾಗ, ಸೀರೆಯ ಅಂಚಿನ ಬಣ್ಣಕ್ಕೆ ಒಪ್ಪುವಂಥ ಉಂಗುರವನ್ನು ತೊಡಬಹುದು. ಅಂದರೆ ಜರಿಯು ಬೆಳ್ಳಿ ಬಣ್ಣದ್ದಾಗಿದ್ದರೆ, ಆ ಬಣ್ಣಕ್ಕೆ ಹೋಲುವ ಕನ್ನಡಿ ಉಂಗುರ ತೊಟ್ಟರಷ್ಟೇ ಚೆನ್ನ.
- ಕನ್ನಡಿ ಉಂಗುರವನ್ನು ಇದೇ ಬೆರಳಿಗೆ ತೊಡಬೇಕೆನ್ನುವ ನಿಯಮವಿಲ್ಲ. ನಿಮಗೆ ಇಷ್ಟವಾದ ಯಾವುದೇ ಬೆರಳಿಗೆ ತೊಟ್ಟರೂ ಚೆನ್ನ.
- ಕನ್ನಡಿ ಉಂಗುರ ಬಹಳ ದೊಡ್ಡದಾಗಿದ್ದರೆ, ಕೈಗೆ ಒಂದೇ ಉಂಗುರ ತೊಡಬೇಕು. ಪ್ರತಿ ಬೆರಳಿಗೂ ಇಂಥ ಒಂದೊಂದು ಉಂಗುರ ತೊಟ್ಟರೆ ಅಂದಗೆಡುತ್ತದೆ.
- ಸಾಂಪ್ರದಾಯಿಕ ಕಾರ್ಯಕ್ರಮಕ್ಕೆ ಹೋಗುವಾಗ ಈ ಉಂಗುರಕ್ಕೆ ಹೋಲುವಂಥ ಕಿವಿಯೋಲೆ, ಸರದ ಜೊತೆ ಮಾಂಗ್ ಟಿಕ್ಕಾ ತೊಡಬಹುದು.
- ತುಂಬಾ ಗ್ರ್ಯಾಂಡ್ ಲುಕ್ ಇರುವ ಮಿರರ್ ರಿಂಗ್‌ಗಳನ್ನು ಕಾಲೇಜು ಮದುವೆ, ಹಬ್ಬ, ಪೂಜೆ, ಮುಂತಾದ ಸಮಾರಂಭಗಳಿಗಷ್ಟೇ ಹಾಕಿಕೊಂಡು ಹೋದರೆ ಚೆನ್ನಾಗಿರುತ್ತದೆ.
- ಯಾವುದೇ ಅಲಂಕಾರ ಇಲ್ಲದ ಸಿಂಪಲ್ಲಾಗಿ ಕನ್ನಡಿಯಷ್ಟೇ ಅಳವಡಿಸಿದ ಉಂಗುರವಾಗಿದ್ದರೆ ಅದನ್ನು ಸೂಟ್ಸ್, ಬ್ಲೇಜರ್, ಶರ್ಟ್, ಸ್ಕರ್ಟ್‌ನಂಥ ಫಾರ್ಮಲ್ ಡ್ರೆಸ್‌ಗಳ ಜೊತೆಯೂ ತೊಡಬಹುದು.
- ಕನ್ನಡಿ ಉಂಗುರ ತೊಟ್ಟಾಗ, ಉಗುರುಗಳು ಕೂಡ ಅಂದವಾಗಿ ಕಾಣಬೇಕು. ಉಂಗುರಕ್ಕೆ ಹೋಲುವ ಬಣ್ಣದ ನೇಲ್‌ಪಾಲಿಶ್ ಹಚ್ಚಿದರೆ ಒಳ್ಳೆಯದು, ಇಲ್ಲವೇ ನೇಲ್ ಆರ್ಟ್ ಮಾಡಿಸಿಕೊಳ್ಳಬಹುದು.
- ಒಂದೇ ಕೈಗೆ ಕನ್ನಡಿ ಉಂಗುರ ಧರಿಸಬೇಕು. ಎರಡು ಕೈಗಳಿಗೆ ಧರಿಸಿದರೆ ಚೆನ್ನಾಗಿ ಕಾಣುವುದಿಲ್ಲ.



